## 9ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು.

ಸಿ.ಸಿ. ನಂ.915/2022

ಪಿಡಬ್ಲ್ಯೂ 2 ಸಿ.ಡಬ್ಲೂ 7

| | |
|---|---|
| ಸಾಕ್ಷಿದಾರನ ಹೆಸರು | ಬಸವರಾಜು ಮಳೌಳಿ |
| ತಂದೆಯ ಹೆಸರು | ಬಾಳಪ್ಪ |
| ವಯಸ್ಸು | 29 ವರ್ಷ |
| ಕೆಲಸ | ಪೇದೇ., ಗಂಗಮ್ಮನಗುಡಿ ಪೊಲೀಸ್ ಠಾಣೆ |
| ವಾಸ | ಗಂಗಮ್ಮನಗುಡಿ, ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕಃ 21.08.2024ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು 2020 ರಿಂದ 2022 ರವರೆಗೆ ಜಯನಗರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 21.08.2021 ರಂದು ಚಾಸಾ.1 ರವರು ಮತ್ತು ಪಂಚರೊಂದಿಗೆ ಚಾಸಾ.8ರವರೊಂದಿಗೆ 10ನೇ ಮೇನ್, 4ನೇ ಬ್ಲಾಕ್, ಜಯನಗರಕ್ಕೆ ಹೋಗಿ ಪೇಮಸ್ ಟೆಲಿಕಾಂ ಎಲೆಕ್ಟ್ರಾನಿಕ್ ಅಂಗಡಿಗೆ ತೆರಳಿ ಬಂದಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸಬೇಕಾಗಿ ಕೋರಿದ್ದು, ಅಂಗಡಿಯಲ್ಲಿ ಮೊಹಮದ್ ಅನಿಫ್ ಎನ್ನುವವರು ಇದ್ದು, ಅವರಿಗೆ ವಿಷಯ ತಿಳಿಸಿ ಚಾಸಾ.1 ರವರು ಪಂಚರು ಸಿಬ್ಬಂದಿಗಳ ಸಮಕ್ಷಮ ಅಂಗಡಿ ಪರಿಶೋಧನೆ ಮಾಡಿದಾಗ ಆಪಲ್ ಕಂಪನಿಯ 88 ನಕಲಿ ಮೊಬೈಲ್ ಬ್ಯಾಕ್ ಕೇಸ್ ಕವರ್ ಗಳು ಸಿಕ್ಕವು. ಅವುಗಳು ನಕಲಿ ಎಂದು ಚಾಸಾ.1 ರವರು ಗುರುತಿಸಿದ್ದರು. ಆದ್ದರಿಂದ ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಬರೆದು ಅಮಾನತುಪಡಿಸಿಕೊಂಡೆವು. ನಂತರ ಮುದ್ದೆ ಮಾಲು ನೊಂದಿಗೆ ಠಾಣೆಗೆ ಹೋಗಿರುತ್ತೇವೆ. ನಾನು ಪಂಚನಾಮೆಯ ಕುರಿತು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಮುದ್ದೆ ಮಾಲುಗಳನ್ನು ಈಗಾಗಲೇ ಎಂಓ-1 ಎಂದು ಗುರುತಿಸಿಕೊಳ್ಳಲಾಗಿದೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಪರ ವಕೀಲರು ಆರೋಪಿತನನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲವೆಂದು ಅರ್ಜಿಯಲ್ಲಿ ನಮೂದಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರಃ ಶ್ರೀಮತಿ ಎಸ್ ವೈ ಎಸ್ ವಕೀಲರಿಂದಃ

This is a True Copy of the Court Records Online. Authenticated @ districts.ecourtsindia.com/cnr/KABC030026822022/truecopy/order-3.pdf

www.ecourtsindia.com

ಆ ದಿನ ನಿಮ್ಮ ಕರ್ತವ್ಯದ ಅವಧಿ ಎಷ್ಟರಿಂದ ಎಷ್ಟು ಆಗಿತ್ತು ಎಂದರೆ ಸಾಕ್ಷಿಯು ಬೆಳಿಗ್ಗೆ 9.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಇತ್ತು ಎಂದು ನುಡಿದಿರುತ್ತಾರೆ. ಆ ದಿನ ನಾವು ಠಾಣೆಯನ್ನು 3.45 ಗಂಟೆಗೆ ಬಿಟ್ಟು ಅಂಗಡಿಗೆ ಬಳಿ ಸುಮಾರು 4 ಗಂಟೆಗೆ ತಲುಪಿರುತ್ತೇವೆ. ನಮ್ಮ ಠಾಣೆಯಿಂದ ಗುನ್ನ ಸ್ಥಳವು ಸುಮಾರು ಒಂದೂವರೆ ಇಂದ ಎರಡು ಕಿಲೋಮೀಟರ್ ಅಂತರದಲ್ಲಿದೆ. ನೀವು ಗುನ್ನ ಸ್ಥಳದಲ್ಲಿ ಸಿಸಿಟಿವಿ ಇತ್ತೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ. ಮುದ್ದೆ ಮಾಲುಗಳನ್ನು ಅಮಾನತುಪಡಿಸಿಕೊಳ್ಳುವಾಗ ಪೋಟೋಗಳನ್ನಾಗಲೀ ಅಥವಾ ಅದರ ವಿಡೀಯೋ ಚಿತ್ರೀಕರಣವಾಗಲಿ ಮಾಡಿರುತ್ತೀರಿಯಾ ಎಂದರೆ ಸಾಕ್ಷಿಯು ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ನನಗೆ ಇರುವುದಿಲ್ಲವೆಂದು ನುಡಿದಿರುತ್ತಾರೆ. ಆರೋಪಿತನು ನೇರವಾಗಿ ಠಾಣೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನೀವು ನಿಮ್ಮ ತನಿಖಾಧಿಕಾರಿಯವರೊಂದಿಗೆ ಗುನ್ನ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನೀವು ಅಮಾನತುಪಡಿಸಿಕೊಂಡಂತಹ 88 ಮೊಬೈಲ್ ಬ್ಯಾಕ್ ಕೇಸ್ ಕವರ್ ಗಳು ಯಾವ ಅಳತೆಯವದ್ದಾಗಿದ್ದವು ಎಂದು ಹೇಳಲು ಬರುವುದಿಲ್ಲ. ಮುದ್ದೆ ಮಾಲುಗಳಂತಹ ವಸ್ತುಗಳು ನಿಮ್ಮ ಠಾಣೆಯಲ್ಲಿ ಮೊದಲೇ ಸಂಗ್ರಹವಾಗಿದ್ದವು ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳು ದಾಖಲಿಸಿದ ಪ್ರಕರಣಕ್ಕೆ ಬಲ ಬರಲೆಂದು ಅವರು ಹೇಳಿದ ಹಾಗೇ ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಇ.

9ನೇ ಅ. ಮು. ನ್ಯಾ. ದಂ.

This is a True Copy of the Court Records Online. Authenticated @ districts.ecourtsindia.com/cnr/KABC030026822022/truecopy/order-3.pdf